ಅನ್ನಿಸಿಕೊಳ್ಳುತ್ತಾ? ಹಾಗಾದರೆ ನಾನು ಮಾಡುವ ಸೇವಾಕಾರ್ಯಗಳಿಗೆ ಅರ್ಥವೇನು? ಹಾಗೇ ಬೇಕೆಂದರೆ ನಮ್ಮ ಸಂಸ್ಥೆಯ ಆಶ್ರಯದಲ್ಲಿರುವ ಯಾರಿಂದಾದ್ರೂ ತಗೊಳ್ಳಬಹುದಿತ್ತಲ್ಲಾ?" ಎಂದರು ಅವಳನ್ನೇ ನೋಡುತ್ತಾ.

ಸತ್ಯವತಿಗೆ ಅವರ ಮಾತುಗಳು ಬಹಳ ದೊಡ್ಡ ದೊಡ್ಡ ಮಾತುಗಳಾಗಿ ಕಂಡುವು. ಏನು ಉತ್ತರಿಸಬೇಕೋ ಅವಳಿಗೆ ಅರ್ಥವಾಗಲಿಲ್ಲ.

"ಯಾವ ಸಮಸ್ಯೆಗಳ ಪರಿಹಾರಕ್ಕಾಗಿ ನೀನು ಕಿಡ್ನಿ ದಾನಕೊಡಲು ಬಂದಿದೀಯೋ ಆ ಸಮಸ್ಯೆಗಳನ್ನು, ನೀನು ಕಿಡ್ನಿಕೊಡದಿದ್ದರೂ ನಾನು ಪರಿಹರಿಸ್ತೀನಿ. ಆಗ ನೀನು ಕಿಡ್ನಿ ಕೊಡೋ ಅವಶ್ಯಕತೆಯೇ ಬರೋದಿಲ್ಲವಲ್ಲ..."

"ಅಯ್ಯಾ!... ನೀವು ದೊಡ್ಡವರು. ನಿಮ್ಮ ಜೊತೆ ವಾದ ಮಾಡುವಷ್ಟು ದೊಡ್ಡೋಳಲ್ಲ ನಾನು. ಆದ್ರೆ ಸುಮ್ಮನೆ ತಗೊಳ್ಳೋಕೆ ಅಭಿಮಾನ ಅಡ್ಡ ಬರುತ್ತೆ ಅಯ್ಯಾ!..." ವಿನಯದಿಂದ ತಲೆ ತಗ್ಗಿಸಿ ಹೇಳಿದಳು ಸತ್ಯವತಿ.

"ಸರಿ ಹಾಗಾದರೆ. ಕಾರಣ ಯಾವುದಾದರೇನು?... ನೀನು ಮನಃಸ್ಫೂರ್ತಿಯಾಗಿ ಕೊಡ್ತಿದೀಯ ತಾನೆ? ಆದರೆ, ಒಂದು ವಿಷಯ ಮಾತ್ರ ಚೆನ್ನಾಗಿ ನೆನಪಿಟ್ಟುಕೊ... ನೀನು ಕಿಡ್ನಿ ಕೊಟ್ಟರೂ ಕೊಡದೆ ಇದ್ದರೂ ನಾನು ನಿನ್ನ ಸಮಸ್ಯೆಗಳನ್ನು ಪರಿಹರಿಸ್ತೀನಿ. ಅದರ ಬಗ್ಗೆ ಸಂಶಯ ಬೇಡ..." ಎನ್ನುತ್ತಾ ಕುರ್ಚಿಯಿಂದ ಎದ್ದರು.

ಆ ರಾತ್ರಿ ಸತ್ಯವತಿಗೆ ನಿದ್ದೆ ಹತ್ತಲಿಲ್ಲ. ಬೆಳಕು ಹರಿಯುವವರೆಗೂ ಅಸ್ಪಷ್ಟ ಆಲೋಚನೆಗಳು.

ಮಾಧವರಾಯರು ಬೆಳಗ್ಗೆಯೇ ಸತ್ಯವತಿಯನ್ನು ದೈಹಿಕ ತಪಾಸಣೆಗೆ, ಆಸ್ಪತ್ರೆಗೆ ಕರೆದುಕೊಂಡು ಹೋದರು. ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗೆ ಅಗತ್ಯವಾದ ಬ್ಲಡ್ ಟೆಸ್ಟ್‌ಗಳು, ಟುಡಿ ಎಕೋಗಳು, ಕಲರ್ ಡಾಪ್ಲರ್ ಸ್ಕ್ಯಾನಿಂಗ್‌ಗಳು ಮೊದಲಾದುವುಗಳ ಮೂಲಕ ಯಾವುದೇ ಆತಂಕಕಾರಿ ಆರೋಗ್ಯ ತೊಂದರೆಗಳು ಇಲ್ಲವೆಂಬುದು ಖಾತ್ರಿಯಾಯಿತು.

"ಉಳಿದ ಪರೀಕ್ಷೆಗಳು ಅಂದರೆ ಟಿಷ್ಯೂ ಮ್ಯಾಚಿಂಗ್, ಅಲ್ಟ್ರಾಸೋನೋಗ್ರಾಮ್, ಡಿಟಿಪಿಎ ಸ್ಕ್ಯಾನ್‌ಗಳನ್ನು ನಾಳೆ ಮಾಡಿಸಿದರಾಯಿತು. ನಡಿಯಮ್ಮಾ ಒಂದುಸಲ ಅಮ್ಮನವರನ್ನು ನೋಡುವಿಯಂತೆ..." ಎಂದ ಮಾಧವರಾಯರು, ಸತ್ಯವತಿಯನ್ನು ತಮ್ಮ ಪತ್ನಿಯಿದ್ದ ಸ್ಪೆಷಲ್ ರೂಮಿಗೆ ಕರೆದುಕೊಂಡು ಹೋದರು.

ಹಾಸಿಗೆಯ ಮೇಲೆ ಮಲಗಿದ್ದವರನ್ನು ನೋಡಿ ಬೆಚ್ಚಿದಳು ಸತ್ಯವತಿ. ಮುಖವನ್ನು ನೋಡಿದ್ದರಿಂದ ಆಕೆ ಆಲ್ಬಮ್‌ಗಳಲ್ಲಿದ್ದ ಮಾಧವರಾಯರ ಹೆಂಡತಿ ಇಂದ್ರಾಣಿ ಎಂದು ಗುರುತಿಸಿದಳು. ಗುರುತು ಸಿಗದಷ್ಟು ಬಡವಾಗಿ ಹಲ್ಲಿಯಂತೆ ಹಾಸಿಗೆಗೆ ಅಂಟಿಕೊಂಡಿದ್ದರು. ಮುಖ ಕಂಗೆಟ್ಟಿತ್ತು.

ಅಲ್ಬಮ್‌ನಲ್ಲಿದ್ದ ಸುಂದರ ಸ್ತ್ರೀ ಇವರೇನಾ!... ಎಂದು ಅಚ್ಚರಿಯಿಂದ ಅವರನ್ನೇ ನೋಡುತ್ತಾ ಅಪ್ರಯತ್ನವಾಗಿ ಕೈ ಜೋಡಿಸಿ ನಮಸ್ಕರಿಸಿದಳು ಸತ್ಯವತಿ.

ಅವಳನ್ನು ಹತ್ತಿರಕ್ಕೆ ಬರುವಂತೆ ಸಂಜ್ಞೆ ಮಾಡಿದರು ಇಂದ್ರಾಣಿ. ಸತ್ಯವತಿ ಅವರ ಹತ್ತಿರ ಹೋದಳು.

"ನಿನಗ್ಯಾವ ಸಂಬಂಧ ಇಲ್ಲದಿದ್ದರೂ ನನ್ನ ಸಲುವಾಗಿ ತ್ಯಾಗಕ್ಕೆ ಸಿದ್ಧಳಾಗಿದ್ದೀಯಾ?..."

"ಹಾಗೆ ಅನ್ನಬೇಡಿ ತಾಯಿ. ನಿಮ್ಮಂಥವರು ನೂರುಕಾಲ ಬದುಕಿ ಬಾಳಬೇಕು. ನಿಮ್ಮ ನೆರಳಲ್ಲಿ ಅದೆಷ್ಟೋ ಜನರಿಗೆ ಆಶ್ರಯ ದೊರೀಬೇಕು..."

"ಪ್ರಾಣದ ಬೆಲೆ ಶ್ರೀಮಂತನದಾದರೂ ಬಡವನದಾದರೂ ಒಂದೇ ಅಲ್ಲವೇನಮ್ಮಾ!..."

"ಹಾಗನ್ನಬೇಡಿ ಅಮ್ಮಾ!... ನಿಮ್ಮಂಥವರು ಸಮಾಜಕ್ಕೆ ಅತ್ಯಗತ್ಯ. ನಮ್ಮಂಥವರು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಪ್ರಪಂಚಕ್ಕೇನೂ ನಷ್ಟವಿಲ್ಲ."